ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಪ್ರಶ್ನೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸಂಬಂಧಪಟ್ಟಿದ್ದರಿಂದ, ಆ ಅಂಕಿಸಂಖ್ಯೆ ಕೊಟ್ಟಿದ್ದೇನೆ. ಇದರಲ್ಲಿ ಹಿಂದುಳಿದ ವರ್ಗದವರ ಸಂಖ್ಯೆ ಸೇರಿಲ್ಲ. ನಾನು ಈಗಾಗಲೇ ಬರೆದಿದ್ದೇನೆ. ಈ ವಿಷಯವಾಗಿ ಇನ್ನು ಏನಾದರೂ ಉಳಿದಿದ್ದರೆ, ಆದಷ್ಟು ಬೇಗ ರೆಕಾರ್ಡ್ ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಪ್ರ. ಸಂ. ೭೧೦(೨೨೦೯) (ಮಾನ್ಯ ಸದಸ್ಯರು ಹಾಜರಿರಲಿಲ್ಲ) ೨೮ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ ಸಂಖ್ಯೆ ೫೦೮ (೧೭೪೫) ಶ್ರೀ ಆರ್. ರಾಮಯ್ಯನವರ ಪ್ರಶ್ನೆಯನ್ನು ಮುಂದೂಡಲಾಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಉಡುಪಿ ಶಿವಳ್ಳಿನೇಕಾರರ ಸಹಕಾರ ಸಂಘದಲ್ಲಿ ನಡೆಯುತ್ತಿರುವ ದುರಾಡಳಿತದ ಬಗ್ಗೆ

೨೨೫೭. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಶಿವಳ್ಳಿನೇಕಾರರ ಸಹಕಾರ ಸಂಘದಲ್ಲಿ ನಡೆಯುತ್ತಿರುವ ದುರಾಡಳಿತವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಾದಲ್ಲಿ ಸರ್ಕಾರವು ಸಂಘದಲ್ಲಿನ ದುರಾಡಳಿತವನ್ನು ನಿಯಂತ್ರಿಸಲು ಹಾಲಿ ಇರುವ ಆಡಳಿತ ಮಂಡಲಿಯನ್ನು ರದ್ದುಗೊಳಿಸಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸುವುದೇ ?

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕಾ ಮತ್ತು ಸಹಕಾರ ಸಚಿವರು).—

ಅ) ಬಂದಿದೆ.

ಆ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ನಿವಾಸದ ಶಂಖು ಸ್ಥಾಪನೆ

೨೨೦೯. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಕಂದಾಯ ಯೋಜನಾ ಮಂತ್ರಿ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲಾಧಿಕಾರಿಗಳವರ ನಿವಾಸದ ಶಂಖು ಸ್ಥಾಪನೆಯಾದದ್ದು ಯಾವಾಗ,

ಆ) ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ಯಾರ್ಯಾರು ; ಹಾಕಲಾದ ಶಿಲಾಶಾಸನದಲ್ಲಿರುವ ಹೆಸರುಗಳು ಯಾವುವು ; (ವಿವರ ನೀಡುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಚಿಕ್ಕಮಗಳೂರು ಜಿಲ್ಲಾಧಿಕಾರಿಗಳವರ ನಿವಾಸದ ಶಂಖು ಸ್ಥಾಪನೆಯನ್ನು ದಿನಾಂಕ ೨೮-೧೧-೧೯೮೭ರಂದು ನೆರವೇರಿಸಲಾಯಿತು.

ಆ) ಈ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಅಂದಿನ ಲೋಕೋಪಯೋಗಿ ಸಚಿವರಾದ ಶ್ರೀ ಹೆಚ್.ಡಿ. ದೇವೆಗೌಡರು ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಶಿಲಾನ್ಯಾಸ ಫಲಕದಲ್ಲಿ ಶ್ರೀ ಹೆಚ್. ಡಿ. ದೇವೆಗೌಡ, ಮಾನ್ಯ ಲೋಕೋಪಯೋಗಿ ಸಚಿವರು, ಶ್ರೀ ಎನ್. ವೆಂಕಟೇಶ ಪ್ರಸಾದ್, ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ, ಬೆಂಗಳೂರು, ಶ್ರೀ ಡಿ. ಹೆಚ್. ಮಲ್ಲಿಕಾರ್ಜುನಯ್ಯ ಸೂಪರಿಂಟೆಂಡೆಂಟ್ ಇಂಜಿನಿಯರ್, ಹಾಸನ ಹಾಗೂ ಶ್ರೀ ಪಿ. ಆರ್. ರಾಧಕೃಷ್ಣರೆಡ್ಡಿ, ಚಿಕ್ಕಮಗಳೂರು, ಇವರುಗಳ ಹೆಸರುಗಳನ್ನು ನಮೂದಿಸಲಾಗಿದೆ